ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಸುತ್ತೋಲೆ/ಸ.ಪ್ರ.ದ.ಕಾ/ಆಯವ್ಯಯ/04/2023-24.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:21.11.2023.

ಇವರಿಗೆ,
ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಮಾನ್ಯರೇ,

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2023-24ನೇ ಸಾಲಿನ ಅತಿಥಿ ಉಪನ್ಯಾಸಕರುಗಳ ಗೌರವಧನಕ್ಕಾಗಿ ನವೆಂಬರ್-2023ರ ಮಾಹೆಗೆ ಆವಶ್ಯಕವಾಗಿರುವ ಅನುದಾನದ ಮಾಹಿತಿಯನ್ನು ಸಲ್ಲಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ/171/ಡಿಸಿಇ2023, ದಿನಾಂಕ:28.08.2023.
2.ಪತ್ರ ಸಂಖ್ಯೆ: ಕಾಶಿಇ/ನೇವಿ-1/ಅಉಅ/90/2023-24, ದಿನಾಂಕ:24.08.2023, ದಿ:13.09.2023 ಮತ್ತು ದಿನಾಂಕ:21.09.2023

* * * * * * *

ಪ್ರಸ್ತಾಪಿತ ವಿಷಯ ಹಾಗೂ ಉಲ್ಲೇಖಿತ ಪತ್ರಗಳ 1&2ಕ್ಕೆ ಸಂಬಂಧಿಸಿದಂತೆ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2023-24ನೇ ಸಾಲಿನಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ನವೆಂಬರ್-2023ರ ಮಾಹೆಗೆ ಅವಶ್ಯಕವಾಗಿರುವ ಗೌರವಧನದ ಮಾಹಿತಿಯೊಂದಿಗೆ ಇ.ಎಂ.ಐ.ಎಸ್ ಕಾಫಿಯನ್ನು ಗೂಗಲ್ ಫಾರಂನಲ್ಲಿ ಅಪ್‌ಲೋಡ್ ಮಾಡಲು ಹಾಗೂ ಇ-ಮೇಲ್ ವಿಳಾಸ dcegfbudget@gmail.comಕ್ಕೆ ಎಕ್ಸೆಲ್ ಫಾರ್ಮೆಟ್‌ನಲ್ಲಿ ದಿನಾಂಕ:25.11.2023ರೊಳಗೆ ಕಳುಹಿಸಿಕೊಡಲು ಸೂಚಿಸಲಾಗಿದೆ.
ಮುಂದುವರೆದು, ನಿಗಧಿತ ದಿನಾಂಕದ ಅವಧಿಯೊಳಗೆ ಗೌರವಧನದ ಮಾಹಿತಿಯನ್ನು ಸಲ್ಲಿಸದೇ ಇರುವ ಕಾಲೇಜುಗಳಿಗೆ ಗೌರವಧನವನ್ನು ತಡೆಹಿಡಿಯಲಾಗುವುದು ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನವನ್ನು ನಿಗದಿತ ದಿನಾಂಕದೊಳಗೆ ಪಾವತಿಸಲು ಸಾಧ್ಯವಾಗದಿದ್ದಲ್ಲಿ ಪ್ರಾಂಶುಪಾಲರುಗಳೇ ನೇರ ಹೊಣೆಗಾರರಾಗಿರುತ್ತಾರೆ.

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ನಿರ್ದೇಶಕರು

ಪ್ರತಿಯನ್ನು:

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ ವಿಭಾಗ, ಬೆಂಗಳೂರು ಸದರಿ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಕ್ತಕ್ರಮಕ್ಕಾಗಿ.
2. ಪ್ರಾದೇಶಿಕ ಜಂಟಿ ನಿರ್ದೇಶಕರು. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರ್ಗಿ – ಸೂಕ್ತ ಕ್ರಮಕ್ಕಾಗಿ